ನೋಂದಣಿ ಸಂಖ್ಯೆ : 175/86-87

# ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ.)

(ಸರ್ಕಾರದ ಮಾನ್ಯತೆ ಪಡೆದಿದೆ)

# Karnataka State Government Disabled Employees Association (Regd.)

ಸ್ಥಾಪನೆ : 1985

(Recognised by Government of Karnataka)

ಗೌರವಾಧ್ಯಕ್ಷರು
ಪ್ರೋ. ಎಸ್. ರೇಣುಕಾರಾಧ್ಯ

ರಾಜ್ಯಾಧ್ಯಕ್ಷರು
ಆರ್. ಇಂದ್ರೇಶ್, M.B.A.
✆ : 94828 94462

ಕಾರ್ಯಾಧ್ಯಕ್ಷರು
ಡಾ|| ಪಿ. ರಾಮಣ್ಣ

ಪ್ರಧಾನ ಕಾರ್ಯದರ್ಶಿ
ಎಸ್.ಎನ್. ದೇವೇಂದ್ರಪ್ಪ, M.E.
✆ : 8884169806

ಸಂಖ್ಯೆ : ಕ.ರಾ.ಸ.ಅಂ.ನೌ.ಸಂ./ ದಿನಾಂಕ : 31/7/2017

ಮಾನ್ಯ ಅಧ್ಯಕ್ಷರು,
6 ನೆ ವೇತನ ಆಯೋಗ
ಕರ್ನಾಟಕ ಸರ್ಕಾರ
ಬೆಂಗಳೂರು.

ಮಾನ್ಯರೇ,

**ವಿಷಯ: ರಾಜ್ಯದ 6 ನೇ ವೇತನ ಆಯೋಗಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘದ ವತಿಯಿಂದ ಸಲ್ಲಿಸುತ್ತಿರುವ ಮನವಿ**

======

ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘವು ರಾಜ್ಯದ ಎಲ್ಲಾ ಇಲಾಖೆಗಳ ಅಂಗವಿಕಲತೆಯುಳ್ಳ ಸರ್ಕಾರಿ ನೌಕರರನ್ನು ಪ್ರತಿನಿಧಿಸುವ ಸಂಘವಾಗಿದ್ದು, ಸರ್ಕಾರದ ಅಧಿಕೃತ ಮಾನ್ಯತೆ ಪಡೆದ ಸಂಘವಾಗಿರುತ್ತದೆ. **ನಮ್ಮ ಸಂಘವು ಕಳೆದ 32 ವರ್ಷಗಳಿಂದ ರಾಜ್ಯದ ಸರ್ಕಾರಿ ನೌಕರರ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡುತ್ತಾ ಬಂದಿರುತ್ತದೆ.** ಹಾಗೇಯೇ ನ್ಯಾಯಮೂರ್ತಿ ವೆಂಕಟಸ್ವಾಮಿ ರವರ ನೇತೃತ್ವದ 3 ನೇ ವೇತನ ಆಯೋಗದಿಂದ ಇಲ್ಲಿಯವರೆಗಿನ ಎಲ್ಲಾ ವೇತನ ಆಯೋಗಗಳ ಮುಂದೆ ನಮ್ಮ ಸಂಘವು ಮನವಿಗಳನ್ನು ಸಲ್ಲಿಸುತ್ತಾ ಬಂದಿರುತ್ತದೆ.

ದಕ್ಷ ಆಡಳಿತಗಾರರಾದ ತಮ್ಮ ಘನ ಅಧ್ಯಕ್ಷತೆಯಲ್ಲಿ ಸರ್ಕಾರವು 6 ನೇ ವೇತನ ಆಯೋಗವನ್ನು ರಚಿಸಿದ್ದು, ತಾವು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಅದರಲ್ಲೂ ಅಂಗವಿಕಲತೆಯುಳ್ಳ ನೌಕರರ ಬೇಡಿಕೆಗಳ ಮನವಿಯನ್ನು ಸಹಾನುಭೂತಿಯಿಂದ ಪರಿಗಣಿಸಿ ಸೂಕ್ತ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಮಾಡಬೇಕೆಂದು ಸಹ ತಮ್ಮಲ್ಲಿ ಈ ಮೂಲಕ ಅರಿಕೆ ಮಾಡಿಕೊಳ್ಳುತ್ತೇವೆ.

Karnataka State Government Disabled Employees Association
Renukaradhya S
Indresh R



Website: www.ksgdea.org e-mail: info@ksgdea.org

ಸಂಖ್ಯೆ : ಕ.ರಾ.ಸ.ಅಂ.ನೌ.ಸಂ./ ದಿನಾಂಕ :

ಅಂಗವಿಕಲತೆಯುಳ್ಳ ಸರ್ಕಾರಿ ನೌಕರರು ಸರ್ಕಾರಿ ಸೇವೆಗಳಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿದ್ದು, ಇತರೆ ನೌಕರರಿಗೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿರುತ್ತಾರೆ. ಆದರೆ, ಅವರಿಗೆ ಅವರದೇ ಆದ ಕೆಲವೊಂದು ಸಮಸ್ಯೆಗಳನ್ನು ಪರಿಹರಿಸಿ ಉತ್ತಮ ಸೇವಾ ಸೌಲಭ್ಯ, ಮುಂಬಡ್ತಿ ಹಾಗೂ ಅವರು ಕಾರ್ಯನಿರ್ವಹಿಸುವ ಕೆಲಸದ ಸ್ಥಳಗಳಲ್ಲಿ ಅಂಗವಿಕಲ-ಸ್ನೇಹಿ ವಾತಾವರಣ ಕಲ್ಪಿಸಿದರೆ ಅವರು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಹೆಚ್ಚಿನ ಉತ್ಪಾದಕತೆಯಿಂದ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ.

**<u>6 ನೇ ವೇತನ ಆಯೋಗದ ಮುಂದೆ ಮಂಡಿಸುತ್ತಿರುವ ಪ್ರಮುಖ ಬೇಡಿಕೆಗಳ ಮನವಿಗಳು ಈ ಮುಂದಿನಂತಿವೆ.</u>**

**1. ಬಡ್ತಿಗಳಲ್ಲಿ ಮೀಸಲಾತಿ:-**

ಕರ್ನಾಟಕ ರಾಜ್ಯವು 'ಸಿ' ಮತ್ತು 'ಡಿ' ವರ್ಗದ ನೇರನೇಮಕಾತಿಗಳಲ್ಲಿ ಶೇಕಡ 5 ರಷ್ಟು ಮೀಸಲಾತಿ ಸೌಲಭ್ಯವನ್ನು ಅಂಗವಿಕಲರಿಗೆ ಕಲ್ಪಿಸಿ ಇತರೆ ರಾಜ್ಯಗಳಿಗೆ ಮಾದರಿಯಾಗಿದೆ. ಅದೇ ರೀತಿ 'ಎ' ಮತ್ತು 'ಬಿ' ವರ್ಗದ ಹುದ್ದೆಗಳಲ್ಲಿ ಶೇಕಡ 3 ರಷ್ಟು ಮೀಸಲಾತಿಯನ್ನು ಕಲ್ಪಿಸಿದೆ. ಒಂದು ಸಾರಿ ನೇಮಕಾತಿ ಹೊಂದಿದ ಅಂಗವಿಕಲ ನೌಕರರಿಗೆ ಬಡ್ತಿಗಳಲ್ಲಿ ಮೀಸಲಾತಿ ಇಲ್ಲದೇ ಇರುವುದರಿಂದ ಸಾಮಾನ್ಯ ವರ್ಗ ತಮ್ಮ ಸೇವಾವಧಿ ಪೂರ್ತಿ ಕಾಯಬೇಕಾದ ಪರಿಸ್ಥಿತಿ ಇದೆ. ಇದರಿಂದ ಅಂಗವಿಕಲ ನಿರುದ್ಯೋಗಿಗಳು ನೇಮಕಾತಿಗಳಿಂದ ವಂಚಿತರಾಗುತ್ತಿದ್ದಾರೆ.

<u>2016 ರ **ಅಂಗವಿಕಲ ವ್ಯಕ್ತಿಗಳ ಅಧಿನಿಯಮ** ಹಾಗೂ **ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪುಗಳಲ್ಲಿ**</u> **ಅಂಗವಿಕಲ ಸರ್ಕಾರಿ ನೌಕರರಿಗೆ ಮುಂಬಡ್ತಿಗಳಲ್ಲಿಯೂ ಮೀಸಲಾತಿ ಅನ್ವಯಿಸುತ್ತದೆ** ಎಂದು ಸ್ಪಷ್ಟಪಡಿಸಿರುವುದರಿಂದ **<u>ಅದರಂತೆ ಹರಿಯಾಣ ಮುಂತಾದ ರಾಜ್ಯ ಸರ್ಕಾರಗಳು ಬಡ್ತಿಗಳಲ್ಲಿ ಮೀಸಲಾತಿಯನ್ನು ಜಾರಿಗೆ ತಂದಿವೆ.</u>** ಅದೇ ರೀತಿ <u>ಕರ್ನಾಟಕ ಸರ್ಕಾರವು ಸಹ ಅಂಗವಿಕಲ ನೌಕರರಿಗೆ ಮುಂಬಡ್ತಿಗಳಲ್ಲಿ ಮೀಸಲಾತಿ ಕಲ್ಪಿಸಲು 6 ನೇ ವೇತನ ಆಯೋಗವು ಶಿಫಾರಸ್ಸು ಮಾಡಬೇಕೆಂದು ಈ ಮೂಲಕ ವಿನಂತಿಸುತ್ತೇವೆ.</u>

Karnataka State Government Disabled Employees Association
Renukaradhya S
Indresh R

ಸಂಖ್ಯೆ : ಕ.ರಾ.ಸ.ಅಂ.ನೌ.ಸಂ./ ದಿನಾಂಕ :

2. **ಅಂಗವಿಕಲ ನಿರುದ್ಯೋಗಿಗಳಿಗೆ ಬ್ಯಾಕ್‌ಲಾಗ್ ಮೂಲಕ ನೇರ ನೇಮಕಾತಿಗೆ ಅವಕಾಶ:–**

ಕರ್ನಾಟಕ ರಾಜ್ಯ ಸರ್ಕಾರದ ಸೇವೆಗಳಲ್ಲಿ 7.2 ಲಕ್ಷ ಮಂಜೂರಾದ ಹುದ್ದೆಗಳಿದ್ದು, 1/3 ಭಾಗದಷ್ಟು ಹುದ್ದೆಗಳು ಖಾಲಿ ಇವೆ. ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ನೇರ ನೇಮಕಾತಿಯಲ್ಲಿ ಕಲ್ಪಿಸಿರುವ ಶೇಕಡ 5 ಮತ್ತು ಶೇಕಡ 3 ರ ಮೀಸಲಾತಿಯನ್ವಯ **ಸರ್ಕಾರಿ ಸೇವೆಗಳಲ್ಲಿ ಕನಿಷ್ಠ 25000 ದಿಂದ 30000 ಅಂಗವಿಕಲ ನೌಕರರು ಇರಬೇಕಾಗಿತ್ತು.** ಆದರೆ, ನಿಯಮಿತವಾಗಿ ನೇಮಕಾತಿಗಳು ಆಗದೇ ಇರುವುದರಿಂದ ಗ್ರೂಪ್ 'ಡಿ' ಹುದ್ದೆಗಳನ್ನು ಬಹುತೇಕ **ಹೊರಗುತ್ತಿಗೆಗೆ ನೀಡುತ್ತಿರುವುದರಿಂದ ಅಂಗವಿಕಲರಿಗೆ ಸರ್ಕಾರಿ ಸೇವೆಗಳಲ್ಲಿ ಅವಕಾಶಗಳು ಕಡಿಮೆಯಾಗಿ** ಸರ್ಕಾರಿ ಸೇವೆಗಳಲ್ಲಿ **ಕೇವಲ ಸುಮಾರು 11000 ಜನ ಅಂಗವಿಕಲರು ಕಾರ್ಯನಿರ್ವಹಿಸುತ್ತಿದ್ದಾರೆ.**

ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ಜೀವನ ಭದ್ರತೆ ದೊರೆಯಬೇಕಾದರೆ ಅವರಿಗೆ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳು ಸಿಗುವಂತಾಗಬೇಕು. **ಈ ಹಿನ್ನೆಲೆಯಲ್ಲಿ, ಸರ್ಕಾರದ ಎಲ್ಲಾ ಇಲಾಖೆ ಮತ್ತು ವೃಂದಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಬ್ಯಾಕ್‌ಲಾಗ್ ಮೂಲಕ ನೇರ ನೇಮಕಾತಿ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗಿ ವಿನಂತಿಸುತ್ತೇವೆ.**

3. **ಅಂಗವಿಕಲ ಸರ್ಕಾರಿ ನೌಕರರಿಗೆ ಪ್ರಯಾಣ ಭತ್ಯೆ:–**

(ಅ) ಕರ್ನಾಟಕ ಸರ್ಕಾರವು 1979 ರಿಂದ ಅಂಗವಿಕಲ ಸರ್ಕಾರಿ ನೌಕರರಿಗೆ ಸಾರಿಗೆ ಸೌಕರ್ಯಕ್ಕಾಗಿ ಪ್ರಯಾಣ ಭತ್ಯೆಯನ್ನು ನೀಡುತ್ತಾ ಬಂದಿದೆ. ಅಂಗವಿಕಲ ಸರ್ಕಾರಿ ನೌಕರರು ಕೆಲಸದ ಸ್ಥಳಗಳಿಗೆ ಬಂದು–ಹೋಗಲು ಅವರದೇ ಆದ ವಾಹನ ಸೌಕರ್ಯ ಹೊಂದಬೇಕಾಗಿರುತ್ತದೆ. ಇದಕ್ಕಾಗಿ 5 ನೇ ವೇತನ ಆಯೋಗದ ಶಿಫಾರಸ್ಸಿನಂತೆ ಮೂಲವೇತನದ ಶೇಕಡ 6 ರಷ್ಟು ಪ್ರಯಾಣ ಭತ್ಯೆಯನ್ನು ನೀಡಲಾಗುತ್ತಿದೆ. ಗ್ರೂಪ್ 'ಸಿ' ಮತ್ತು 'ಡಿ' ವರ್ಗದ ಹುದ್ದೆಗಳಲ್ಲಿ ಹೆಚ್ಚಿನ ಸಂಖ್ಯೆಯ ಅಂಗವಿಕಲ ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಅವರಿಗೆ ರೂ.600 ರಿಂದ ರೂ.1200 ರವರೆಗೆ ಮಾತ್ರ ಪ್ರಯಾಣ ಭತ್ಯೆ ದೊರಕುತ್ತಿದೆ. ಆದರೆ ಇಂಧನ ಬೆಲೆ ಏರಿಕೆಯಿಂದ ಅವರು ಕೆಲಸದ ಸ್ಥಳಗಳಿಗೆ ಬಂದು ಹೋಗಲು ತಮ್ಮ ವೇತನದ ಶೇಕಡ 30 ರಷ್ಟು ಖರ್ಚು ಮಾಡಬೇಕಾಗಿ ಬರುತ್ತದೆ. ಆದುದರಿಂದ, **ಎಲ್ಲಾ ವರ್ಗದ ಅಂಗವಿಕಲ ನೌಕರರಿಗೂ ಮೂಲ ವೇತನದ ಶೇಕಡ 12 ರಷ್ಟು ಪ್ರಯಾಣ ಭತ್ಯೆ ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗಿ ಈ ಮೂಲಕ ಅರಿಕೆ ಮಾಡಿಕೊಳ್ಳುತ್ತೇವೆ.**

Karnataka State Government Disabled Employees Association
Renukaradhya S
Indresh R

ಗೌರವಾಧ್ಯಕ್ಷರು ಶ್ರೀ ಎಸ್. ರೇಣುಕಾರಾಧ್ಯ

ರಾಜ್ಯಾಧ್ಯಕ್ಷರು ಆರ್. ಇಂದ್ರೇಶ್, M.B.A. ✆ : 94828 94462

ಕಾರ್ಯಾಧ್ಯಕ್ಷರು ಡಾ|| ಪಿ. ರಾಮಣ್ಣ

ಪ್ರಧಾನ ಕಾರ್ಯದರ್ಶಿ ಎಸ್.ಎನ್. ದೇವೇಂದ್ರಪ್ಪ, M.E. ✆ : 8884169806

ಸಂಖ್ಯೆ : ಕ.ರಾ.ಸ.ಅಂ.ನೌ.ಸಂ./ ದಿನಾಂಕ :

(ಅ) ಈ ಪ್ರಯಾಣ ಭತ್ಯೆಯನ್ನು ರಜೆ ಅವಧಿಯಲ್ಲಿ ಶಾಲಾ ಶಿಕ್ಷಕರು, ಕಾಲೇಜು ಉಪನ್ಯಾಸಕರಿಗೆ ನೀಡುತ್ತಿಲ್ಲ. **ಆದರೆ ಇತ್ತೀಚಿನ ವರ್ಷಗಳಲ್ಲಿ ಬೋಧಕ ವರ್ಗದವರು ರಜೆ ಅವಧಿಯಲ್ಲಿಯೂ ಮೌಲ್ಯಮಾಪನ, ಜನಗಣತಿ, ಶಾಲೆಗೆ ಮಕ್ಕಳ ದಾಖಲಾತಿ, ಮಕ್ಕಳ ಗಣತಿ ಆಂದೋಲನ ಇತ್ಯಾದಿ ಕೆಲಸಗಳಿಗೆ ಕಛೇರಿಗೆ ಬಂದು ಹೋಗಬೇಕಾಗುತ್ತದೆ. ಆದುದರಿಂದ ಪ್ರಯಾಣ ಭತ್ಯೆಯನ್ನು ರಜೆ ಅವಧಿಯಲ್ಲಿ ನಿಲ್ಲಿಸದೇ ವರ್ಷದ 12 ತಿಂಗಳು ನೀಡುವಂತೆ ಶಿಫಾರಸ್ಸು ಮಾಡಬೇಕೆಂದು ವಿನಂತಿಸುತ್ತೇವೆ.**

(ಇ) ಅಂಗವಿಕಲ ನೌಕರರಿಗೆ ನೀಡುತ್ತಿರುವ ಪ್ರಯಾಣ ಭತ್ಯೆಯನ್ನು ಕಿವುಡ ಮತ್ತು ಮೂಕ ನೌಕರರಿಗೆ ನೀಡುತ್ತಿಲ್ಲ. 2016 ರ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಪ್ರಕಾರ ಎಲ್ಲಾ ವಿಧದ ಅಂಗವಿಕಲರಿಗೂ ಸಮಾನ ಅವಕಾಶ ನೀಡುವುದು ಕಡ್ಡಾಯವಾಗಿರುವುದರಿಂದ ಹಾಗೂ ಸರ್ಕಾರಿ ಸೇವೆಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವ ಕಿವುಡ ಮತ್ತು ಮೂಕ ನೌಕರರಿಗೂ ಪ್ರಯಾಣ ಭತ್ಯೆ ಸೌಲಭ್ಯ ವಿಸ್ತರಿಸಲು ಶಿಫಾರಸ್ಸು ಮಾಡಬೇಕಾಗೀ ಈ ಮೂಲಕ ವಿನಂತಿಸುತ್ತೇವೆ.

4. 5 ನೇ ವೇತನ ಆಯೋಗ ಶಿಫಾರಸ್ಸಿನಂತೆ ಸರ್ಕಾರದ ಆದೇಶ ಸಂಖ್ಯೆ. FD 12 SRP 2012 ದಿನಾಂಕ:10ನೇ ಜೂನ್, 2013ರಲ್ಲಿ ಅಂಗವಿಕಲ ನೌಕರರು ವಾಹನ ಇತ್ಯಾದಿ ಸಾಧನ ಸಲಕರಣೆಗಳ ಖರೀದಿಗೆ ಗರಿಷ್ಠ ರೂ.25000 ಅಥವಾ ಶೇಕಡ 25 ರಷ್ಟು ಬೆಲೆಯನ್ನು ಒಂದು ಬಾರಿಯ ಪರಿಹಾರಧನವಾಗಿ ನೀಡಲು ಆದೇಶಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಅಂಗವಿಕಲರು ಬಳಸುವ ಸಾಧನ ಸಲಕರಣೆಗಳಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆಯಾಗುತ್ತಿದ್ದು, ಅವುಗಳ ಬೆಲೆ ಗಣನೀಯವಾಗಿ ಹೆಚ್ಚಿದೆ.

ಉದಾ. ಕೃತಕ ಕಾಲು ರೂ. 2 ಲಕ್ಷದಿಂದ ರಿಂದ 3 ಲಕ್ಷಗಳವರೆವಿಗೂ ಬೆಲೆ ಇದೆ. ಶ್ರವಣ ಸಾಧನಗಳ ಬೆಲೆಯೂ ಸಹ ರೂ 2 ಲಕ್ಷದಿಂದ 4 ಲಕ್ಷಗಳವರೆಗೆ ಇದೆ. ಎಲೆಕ್ಟ್ರಿಕ್ ಗಾಲಿ ಕುರ್ಚಿಗಳ ಬೆಲೆ ರೂ. 1.50 ಲಕ್ಷಗಳಿಂದ ಆರಂಭವಾಗುತ್ತದೆ. ಅಂಧ ನೌಕರರು ಬಳಸುವ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ ಬೆಲೆಗಳು ರೂ.1 ಲಕ್ಷಗಳನ್ನು ಮೀರಿದೆ.

ಆದುದರಿಂದ, **ಎಲ್ಲಾ ವಿಧದ ಅಂಗವಿಕಲ ನೌಕರರು ಬಳಸುವ ಸಾಧನ ಸಲಕರಣೆಗಳಿಗೆ ಒಂದು ಬಾರಿ ಪರಿಹಾರಧನವಾಗಿ ರೂ 1 ಲಕ್ಷ ಅಥವಾ ಬೆಲೆಯ ಶೇಕಡ 50 ರಷ್ಟು ಯಾವುದು ಕಡಿಮೆಯೋ ಅದನ್ನು ನೀಡುವಂತೆ ಶಿಫಾರಸ್ಸು ಮಾಡಬೇಕಾಗಿ ವಿನಂತಿಸುತ್ತೇವೆ.**

Karnataka State Government Disabled Employees Association
Renukaradhya S
Indresh R

ನೋಂದಣಿ ಸಂಖ್ಯೆ : 175/86-87

# ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ.)

(ಸರ್ಕಾರದ ಮಾನ್ಯತೆ ಪಡೆದಿದೆ)

# Karnataka State Government Disabled Employees Association (Regd.)

ಸ್ಥಾಪನೆ : 1985

(Recognised by Government of Karnataka)

| ಗೌರವಾಧ್ಯಕ್ಷರು | ರಾಜ್ಯಾಧ್ಯಕ್ಷರು | ಕಾರ್ಯಾಧ್ಯಕ್ಷರು | ಪ್ರಧಾನ ಕಾರ್ಯದರ್ಶಿ |
|---|---|---|---|
| ಶ್ರೀ ಎಸ್. ರೇಣುಕಾರಾಧ್ಯ | ಆರ್. ಇಂದ್ರೇಶ್, M.B.A. ✆ : 94828 94462 | ಡಾ॥ ಪಿ. ರಾಮಣ್ಣ | ಎಸ್.ಎನ್. ದೇವೇಂದ್ರಪ್ಪ, M.E. ✆ : 8884169806 |


ಸಂಖ್ಯೆ : ಕ.ರಾ.ಸ.ಅಂ.ನೌ.ಸಂ./ ದಿನಾಂಕ :

ಸಂಬಂಧಿಸಿದ ಆದೇಶದಲ್ಲಿ ಕೇವಲ **ದೈಹಿಕ ಅಂಗವಿಕಲರಿಗೆ ಎಂದಿರುವುದನ್ನು ಮಾರ್ಪಡಿಸಿ ಎಲ್ಲಾ ವಿಧದ ಅಂಗವಿಕಲ ನೌಕರರು ಬಳಸುವ ಸಾಧನ ಸಲಕರಣೆಗಳಿಗೆ ವಿಸ್ತರಿಸಬೇಕಾಗಿ ವಿನಂತಿಸುತ್ತೇವೆ. ಮತ್ತು ಈ ಆದೇಶದಲ್ಲಿ ಸ್ಪಷ್ಟವಾದ ಲೆಕ್ಕ ಶೀರ್ಷಿಕೆಯನ್ನು ನಮೂದಿಸಬೇಕೆಂದು ಕೋರುತ್ತೇವೆ.**

5. 5 ನೇ ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರಿ ನೌಕರರ ಮಕ್ಕಳು ಅಂಗವಿಕಲರಾಗಿದ್ದಲ್ಲಿ, ಅವರಿಗೆ ಮಾಸಿಕ ರೂ. 500 ಗಳ ಭತ್ಯೆ ನೀಡಲು ಸರ್ಕಾರದ ಆದೇಶ ಸಂಖ್ಯೆ FD 12 SRP 2012 (XIII) ದಿನಾಂಕ:10ನೇ ಜೂನ್ 2013 ರಲ್ಲಿ ಆದೇಶಿಸಲಾಗಿದೆ. ಇದರಿಂದ, ಅಂಗವಿಕಲ ಮಕ್ಕಳನ್ನು ಹೊಂದಿರುವ ಸರ್ಕಾರಿ ನೌಕರರಿಗೆ ಸ್ವಲ್ಪ ಮಟ್ಟಿನ ಪರಿಹಾರ ಸಿಕ್ಕಿದೆ. ಆದರೆ, ವಾಸ್ತವವಾಗಿ ಅಂಗವಿಕಲ ಮಕ್ಕಳ ಪಾಲನೆ, ಪೋಷಣೆ, ವೈದ್ಯಕೀಯ ವೆಚ್ಚ, ಶಿಕ್ಷಣದ ವೆಚ್ಚಗಳಿಗೆ ಅಂತಹ ತಂದೆ ತಾಯಿಗಳು ಮಾಸಿಕ ರೂ.9000 ರಿಂದ ರೂ.15000 ವರೆಗೆ ಖರ್ಚು ಮಾಡಬೇಕಾಗುತ್ತದೆ. ಆದುದರಿಂದ ಈ ಭತ್ಯೆಯನ್ನು **ಕನಿಷ್ಠ ರೂ.4000 ಗಳಿಗಾದರೂ ಹೆಚ್ಚಿಸಲು** ಶಿಫಾರಸ್ಸು ಮಾಡಬೇಕಾಗಿ ಈ ಮೂಲಕ ವಿನಂತಿಸುತ್ತೇವೆ.

6. **ಫ್ಲೆಕ್ಸಿ ಟೈಂ(Flexi Time):–**

5 ನೇ ವೇತನ ಆಯೋಗವು ಅಂಗವಿಕಲ ನೌಕರರಿಗೆ ಫ್ಲೆಕ್ಸಿ ಟೈಂ ಜಾರಿಗೆ ತರುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. **ಆದರೆ ಈ ಶಿಫಾರಸ್ಸು ಇನ್ನೂ ಜಾರಿಯಾಗಿಲ್ಲ.** ಆದುದರಿಂದ, ಮತ್ತೊಮ್ಮೆ ಫ್ಲೆಕ್ಸಿ ಟೈಂ ಜಾರಿಗೆ ತರಲು ಶಿಫಾರಸ್ಸು ಮಾಡಬೇಕೆಂದು ವಿನಂತಿಸುತ್ತೇವೆ.

7. **ವಿಶೇಷ ಸಾಂದರ್ಭಿಕ ರಜೆ (Special Casual Leave):–**

ಅಂಗವಿಕಲ ನೌಕರರು ವೈದ್ಯಕೀಯ ಚಿಕಿತ್ಸೆಗಳಿಗಾಗಿ ಹೆಚ್ಚಿನ ರಜೆಯನ್ನು ಬಳಸಿಕೊಳ್ಳಬೇಕಾಗುತ್ತದೆ. ಆದುದರಿಂದ ಅಂಗವಿಕಲ ನೌಕರರಿಗೆ 10 ದಿನಗಳ ಹೆಚ್ಚಿನ ಸಾಂದರ್ಭಿಕ ರಜೆಗೆ ಅವಕಾಶ ಕಲ್ಪಿಸುವಂತೆ ಶಿಫಾರಸು ಮಾಡಬೇಕಾಗಿ ವಿನಂತಿಸುತ್ತೇವೆ.

Karnataka State Government Disabled Employees Association
Renukaradhya S
Indresh R



Website: www.ksgdea.org e-mail: info@ksgdea.org

ಸಂಖ್ಯೆ : ಕ.ರಾ.ಸ.ಅಂ.ನೌ.ಸಂ./ ದಿನಾಂಕ :

8. <u>ಸರ್ಕಾರಿ ವಸತಿ ಗೃಹಗಳು, ನಿವೇಶನ, ಮನೆಗಳ ಹಂಚಿಕೆಯಲ್ಲಿ ಶೇಕಡ 5 ರಷ್ಟು ಮೀಸಲಾತಿ ಕಲ್ಪಿಸುವುದು:-</u>

ಅಂಗವಿಕಲ ಸರ್ಕಾರಿ ನೌಕರರಿಗೆ ಕೆಲಸದ ಸ್ಥಳದ ಸಮೀಪ ವಸತಿ ಸೌಲಭ್ಯಗಳಿದ್ದರೆ ಹೆಚ್ಚಿನ ಅನುಕೂಲವಾಗುತ್ತದೆ. ಆದುದರಿಂದ, ಸರ್ಕಾರಿ ವಸತಿ ಗೃಹಗಳ ಹಂಚಿಕೆಯಲ್ಲಿ ಶೇಕಡ 5 ರಷ್ಟು ಮೀಸಲಾತಿ ಜಾರಿಗೆ ತರಲು ಶಿಫಾರಸ್ಸು ಮಾಡಬೇಕಾಗಿ ವಿನಂತಿಸುತ್ತೇವೆ. ಅದೇ ರೀತಿ ಅಭಿವೃದ್ಧಿ ಪ್ರಾಧಿಕಾರಗಳು ಮತ್ತು ಸರ್ಕಾರದ ವಿವಿಧ ವಸತಿ ಯೋಜನೆಗಳಲ್ಲಿ ಅಂಗವಿಕಲರಿಗೆ ಶೇಕಡ 5 ರಷ್ಟು ಮೀಸಲಾತಿ ಕಲ್ಪಿಸಲು ಶಿಫಾರಸ್ಸು ಮಾಡಬೇಕಾಗಿ ವಿನಂತಿಸುತ್ತೇವೆ. ಅಂಗವಿಕಲ ವ್ಯಕ್ತಿಗಳ ಅಧಿನಿಯಮ 2016 ರಲ್ಲಿ ಅಂಗವಿಕಲರಿಗೆ ಆದ್ಯತೆಯ ಮೇಲೆ ವಸತಿ ಯೋಜನೆಗಳನ್ನು ರೂಪಿಸಿ ನೀಡಲು ನಿರ್ದೇಶಿಸುತ್ತದೆ.

9. <u>ಕೆಲಸದ ಸ್ಥಳಗಳಲ್ಲಿ ನೌಕರರಿಗೆ ಅಂಗವಿಕಲ-ಸ್ನೇಹಿ ವಾತಾವರಣ ಕಲ್ಪಿಸುವುದು:-</u>

ಅಂಗವಿಕಲ ಸರ್ಕಾರಿ ನೌಕರರು ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಎಲ್ಲಾ ಶಾಲಾ, ಕಾಲೇಜು ಮತ್ತು ಕಚೇರಿಗಳಲ್ಲಿ ರೈಲಿಂಗ್, ರ್‍ಯಾಂಪ್ ವ್ಯವಸ್ಥೆ, ಅಂಗವಿಕಲರು ಬಳಸುವ ಶೌಚಾಲಯಗಳು ಹಾಗೂ ಅಂಗವಿಕಲ ನೌಕರರಿಗೆ ನೆಲಮಹಡಿಯಲ್ಲೇ ಕಾರ್ಯನಿರ್ವಹಣೆಗೆ ಅವಕಾಶ, ಆಡಿಯೋ ಸೌಲಭ್ಯಗಳನ್ನು ಕಲ್ಪಿಸಿ ನಿರ್ವಹಣೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ವಿನಂತಿಸುತ್ತೇವೆ.

ಅಂಗವಿಕಲ ಮಹಿಳಾ ನೌಕರರನ್ನು ಗಮನದಲ್ಲಿಟ್ಟು ಈ ಮೇಲಿನ ಸೌಕರ್ಯಗಳನ್ನು ಕಲ್ಪಿಸಬೇಕೆಂದು ವಿನಂತಿಸುತ್ತೇವೆ.

10. <u>ಅಂಗವಿಕಲ ಸರ್ಕಾರಿ ನೌಕರರು ಮತ್ತು ನಿವೃತ್ತ ಅಂಗವಿಕಲ ನೌಕರರಿಗೆ ವೈದ್ಯಕೀಯ ವಿಮಾ ಯೋಜನೆ ರೂಪಿಸಿ ಜಾರಿಗೆ ತರುವ ಬಗ್ಗೆ.</u>

ಅಂಗವಿಕಲರು ದೈಹಿಕ ಅಂಗವೈಕಲ್ಯಗಳಿಂದಾಗಿ ವೈದ್ಯಕೀಯ ಚಿಕಿತ್ಸೆಗಳಿಗೆ ಹೆಚ್ಚಿನ ಹಣ ಖರ್ಚು ಮಾಡಬೇಕಾಗುತ್ತದೆ. ನಿವೃತ್ತ ಅಂಗವಿಕಲ ನೌಕರರಿಗಂತೂ ಅಂಗವೈಕಲ್ಯದ ಪ್ರಮಾಣ ವಯಸ್ಸಾದಂತೆ ಹೆಚ್ಚಾಗುವುದರಿಂದ ವೈದ್ಯಕೀಯ ಚಿಕಿತ್ಸೆ ಮತ್ತು ಔಷಧಗಳಿಗೆ ತಮ್ಮ ಪಿಂಚಣಿಯ ಶೇ.40ರಷ್ಟು ಭಾಗವನ್ನು ಖರ್ಚು ಮಾಡಬೇಕಾಗುತ್ತದೆ. ಆದುದರಿಂದ, ಅಂಗವಿಕಲ ನೌಕರರು ಮತ್ತು ನಿವೃತ್ತ ನೌಕರರ ಅನುಕೂಲಕ್ಕಾಗಿ ವೈದ್ಯಕೀಯ ವಿಮಾ ಯೋಜನೆಯೊಂದನ್ನು ರೂಪಿಸಿ ಜಾರಿಗೆ ತರಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗಿ ಈ ಮೂಲಕ ವಿನಂತಿಸುತ್ತೇವೆ.

Karnataka State Government Disabled Employees Association
Renukaradhya S
Indresh R

# ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ.)

(ಸರ್ಕಾರದ ಮಾನ್ಯತೆ ಪಡೆದಿದ)

# Karnataka State Government Disabled Employees Association (Regd.)

ಸ್ಥಾಪನೆ : 1985

(Recognised by Government of Karnataka)


ಗೌರವಾಧ್ಯಕ್ಷರು
ಶ್ರೀ ಎಸ್. ರೇಣುಕಾರಾಧ್ಯ

ರಾಜ್ಯಾಧ್ಯಕ್ಷರು
ಆರ್. ಇಂದ್ರೇಶ್, M.B.A.
✆ : 94828 94462

ಕಾರ್ಯಾಧ್ಯಕ್ಷರು
ಡಾ॥ ಪಿ. ರಾಮಣ್ಣ

ಪ್ರಧಾನ ಕಾರ್ಯದರ್ಶಿ
ಎಸ್.ಎಸ್. ದೇವೇಂದ್ರಪ್ಪ, M.E.
✆ : 8884169806


ಸಂಖ್ಯೆ : ಕ.ರಾ.ಸ.ಅಂ.ನೌ.ಸಂ./ ದಿನಾಂಕ :

11. **ದೃಷ್ಟಿ ಮಾಂದ್ಯ ಸರ್ಕಾರಿ ನೌಕರರಿಗೆ ಪ್ರತ್ಯೇಕ ತಂತ್ರಜ್ಞಾನ ಸೌಲಭ್ಯ ಒದಗಿಸುವ ಬಗ್ಗೆ:-**

ದೃಷ್ಟಿ ಮಾಂದ್ಯ ಸರ್ಕಾರಿ ನೌಕರರಿಗೆ ಕಾರ್ಯನಿರ್ವಹಿಸಲು ಪ್ರತ್ಯೇಕವಾಗಿ ಲ್ಯಾಪ್ ಟಾಪ್, ಸ್ಕ್ಯಾನರ್, ABBY FINE SCAN READER, LABEL READER, TALKING CALCULATOR ಹಾಗೂ ಇತರೆ ತಂತ್ರಜ್ಞಾನಗಳನ್ನು ಒದಗಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗಿ ಕೋರುತ್ತೇವೆ. ಇದರಿಂದಾಗಿ, ದೃಷ್ಟಿ ಮಾಂದ್ಯ ನೌಕರರು ಹೆಚ್ಚಿನ ಕಾರ್ಯಕ್ಷಮತೆಯಿಂದ ಕರ್ತವ್ಯ ನಿರ್ವಹಿಸಲು ಅನುಕೂಲವಾಗುತ್ತದೆ.

**ರಾಜ್ಯ ಸರ್ಕಾರಿ ಸೇವೆಗಳಲ್ಲಿ ಕಡಿಮೆ ಸಂಖ್ಯೆಯಲ್ಲಿರುವ ಅಂಗವಿಕಲ ನೌಕರರ ಮೇಲಿನ ನ್ಯಾಯೋಚಿತ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಗಣಿಸಿ,** ಸೂಕ್ತ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಮಾಡುವಂತೆ 6 ನೇ ವೇತನ ಆಯೋಗವನ್ನು ಈ ಮೂಲಕ ಗೌರವ ಪೂರ್ವಕವಾಗಿ ವಿನಂತಿಸುತ್ತೇನೆ.

ವಂದನೆಗಳೊಂದಿಗೆ

ತಮ್ಮ ನಂಬುಗೆಯ,

(ಎಸ್.ಎಸ್. ದೇವೇಂದ್ರಪ್ಪ)
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ

(ಇಂದ್ರೇಶ್ ಆರ್.)
ರಾಜ್ಯಾಧ್ಯಕ್ಷರು
ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ

Karnataka State Government Disabled Employees Association
Renukaradhya S
Indresh R



Website: www.ksgdea.org e-mail: info@ksgdea.org